


**ಆತ್ಮವಿಶ್ವಾಸ ಅಭಿನಂದನೀಯ**

'ಸುಧಾ' ಆ.9ರ ಮುಖಪುಟ ಲೇಖನ 'ದುಡಿವ ಮಹಿಳೆಗೆ ನೂರೆಂಟು ದಾರಿ' ಉಮಾ ಅನಂತ್ ಲೇಖನ ಓದಿ ಸಂತೋಷವಾಯಿತು. ನಾವು ಯಾವುದೇ ಉದ್ಯೋಗ ಮಾಡಲು ಸೈ ಎನ್ನುವ ಸಹೋದರಿಯರ ಆತ್ಮವಿಶ್ವಾಸ ಅಭಿನಂದನೀಯ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಬೆಳ್ಳಾವೆ ರಮೇಶ್, ತುಮಕೂರು

**ಅದ್ಭುತ ಚಿತ್ರ**

ಚೀನಾದ ಗುಹೆಯೊಂದರ 'ಶಿಲೆಯಲ್ಲವಿದು..!' ವಿದ್ಯಾ ವಿ. ಹಾಲಭಾವಿ ಸಂಗ್ರಹಿಸಿರುವ ಚಿತ್ರಗಳು ಅದ್ಭುತವಾಗಿವೆ.

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

**ಶ್ರಾವಣದ ಮಹತ್ವ**

'ಮತ್ತೆ ಶ್ರಾವಣ ಬಂತು!' ವೈನತೇಯರ ವಿಚಾರ ಲಹರಿ ಶ್ರಾವಣದ ಪ್ರಾಮುಖ್ಯವನ್ನು ತಿಳಿಹೇಳುತ್ತದೆ. ಆದರೆ ಈ ಬಗ್ಗೆ ಮತ್ತಷ್ಟು ಚರ್ಚಿಸುವ ಅವಕಾಶ ಇತ್ತು ಎನಿಸುತ್ತದೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

**ಅಪರೂಪದ ಮಾಹಿತಿ**

ಸಿದ್ಧರಾಮ ಹಿರೇಮಠರ 'ಕೊರಚರ ಹಟ್ಟಿಯಲ್ಲಿ ಹಗ್ಗದ ದುಡಿಮೆ' ಅಪರೂಪದ ಮಾಹಿತಿಯಿಂದ ಕೂಡಿತ್ತು.

-ಶೀಲಾ ಸತ್ಯೇಂದ್ರಸ್ವಾಮಿ, ಹರವೆ/ಎಚ್.ಹನುಮಂತಪ್ಪ, ದಾವಣಗೆರೆ

**ಬದುಕು ಬಂಗಾರ**

'ಮನೆಯಂಗಳದ ಮಂಗಳೆ' (ಬರಹ: ಡಾ. ಬ್ರಹ್ಮಾನಂದ ನಾಯಕ) ತುಳಸಿ ನಗು ನಗುತ್ತಾ ಇದ್ದರೆ ನಮ್ಮ ಬದುಕು ಬಂಗಾರವಾಗುತ್ತದೆ.

-ಪ್ರೊ. ಮಧೂರು ಮೋಹನ ಕಲ್ಲೂರಾಯ, ಬೆಳ್ತಂಗಡಿ/ ಎಂ.ಎಲ್. ಲಕ್ಷ್ಮಣ್ ರಾವ್, ದಾವಣಗೆರೆ/ನಾರಾಯಣಯಾಜಿ, ಶಿರಾಲಿ/ ನೆ.ಲ.ರಾಂ. ಬೆಂಗಳೂರು

**'ಪದಬಂಧ'ದ ಗೋಜಲು**

ಆ.2ರ ಪದಬಂಧಕ್ಕೆ ಆ.9ರಲ್ಲಿ ಕೊಟ್ಟಿರುವ ಉತ್ತರದಲ್ಲಿ ಎಡದಿಂದ ಬಲಕ್ಕೆ 'ಗೋದಾಮು', ಮೇಲಿನಿಂದ ಕೆಳಕ್ಕೆ 'ತಿಗುಡು' ಸರಿ ಎಂದಿದೆ. 'ಗು' ಮತ್ತು 'ಗೋ' ಇಲ್ಲಿ ಗೋಜಲಾಗಿವೆ. ಇದು ಹೇಗೆ ಸರಿ? ಆಗಾಗ್ಗೆ ಇಂತಹ ಗೋಜಲು ಇದ್ದೇ ಇರುತ್ತದೆ. ಹಾಗೆ ಮಾಡಬೇಡಿ.

-ಶ್ರೀನಾಥ ಕೊನೇಟಿ, ಬೆಂಗಳೂರು

**ತತ್ವಪದಕಾರರ ಕಥೆ**

'ಮನಬಂದ ಪರಿಯಲಿ ನುಡಿಸಿಕೊಂಡು' ಶ್ರೀನಿವಾಸ ಜಾಲವಾದಿ ಅವರ ಕಥೆ ನಮ್ಮ ಸಗರ ನಾಡಿನ ತತ್ವಪದಕಾರರ ಆಶಯವನ್ನು ಬಿಂಬಿಸಿದೆ.

-ವಿ.ಆರ್.ಬಿರಾದಾರ, ಜೇವರಗಿ/ ಅಂಬಿಕಾ, ಬಸವರಾಜ ಕಡಕೋಳ, ಗುಲ್ಬರ್ಗ

**ಹಣದ ಮದಕ್ಕೆ ಚಾಟಿ ಏಟು**

ಅಕಬರ ಎ. ಸನದಿ ಅನುವಾದಿಸಿರುವ 'ಜವಾಬ್ದಾರಿ' ಮಿನಿ ಕಥೆ ನಿಜಕ್ಕೂ ಹಣದ ಹಿಂದೆ ಓಡುವ ಈಗಿನ ಯುವ ಜನಾಂಗಕ್ಕೆ ಚಾಟಿ ಏಟು ಕೊಟ್ಟಂತಿದೆ.

-ಕೆ.ಎಸ್. ವಿಠಲ್‌ರಾವ್, ಬೆಂಗಳೂರು

**ಕುತೂಹಲಕರ ಧಾರಾವಾಹಿ**

ವಿವೇಕಾನಂದ ಕಾಮತ್ ಅವರ 'ನೆಲ ಮುಗಿಲು' ಧಾರಾವಾಹಿ ಕುತೂಹಲ ಮೂಡಿಸಿ ಓದಿಸಿಕೊಂಡು ಹೋಗುತ್ತಿದೆ.

-ಬಿ.ಎಸ್. ರಮೇಶ್, ಬೆಂಗಳೂರು

**ಹೋಮ್ ಸ್ಟೇ ಮತ್ತೊಂದು ಆಯಾಮ**

'ನೆಲ ಮುಗಿಲು' ಧಾರಾವಾಹಿಯು ಆರಂಭದಲ್ಲೇ ಇತ್ತೀಚಿನ 'ಹೋಮ್ ಸ್ಟೇ' ದಾಳಿ ಪ್ರಕರಣದ ಇನ್ನೊಂದು ಆಯಾಮವನ್ನು ತೆರೆದಿಟ್ಟಿದೆ! ಪಾಶ್ಚಾತ್ಯರನ್ನು ಅನುಸರಿಸುತ್ತಿರುವ ನಮ್ಮ ಯುವ ಪೀಳಿಗೆಯನ್ನು ಈ ಹಾದಿ ಎತ್ತ ಕೊಂಡೊಯ್ಯುವುದೋ ಎಂಬ ಆತಂಕ ಕಾಡಿದೆ.

-ಸುಧೀರ್ ಪಡೀಲ್, ಮಂಗಳೂರು




Invisible Hearing Aids.
Designed just for you.



**FREE** HEARING TEST & CONSULTATION WEEK

- World's MOST POWERFUL Custom Hearing Aids
- World's Only INVISIBLE-IN THE CANAL Hearing Aid
- Special CONCESSION on all Hearing Aids
- Special EXCHANGE OFFERS on all Hearing Aids



Be free from Hearing Problems.

SOUNDFUL 15 YEARS
SINCE 1994
RAJAN SPEECH & HEARING
Listen to life

*"Schedule an Appointment Now"*
**Call Toll-Free: 1800 103 0340**
*( Please call between 9.30 am & 6.30 pm)*
Ph: 41510404, 65467791
email: info@rshc.in, www.rshc.in
Clinic open on Sundays also-by appointment only.

IT'S NEW AND 100% INVISIBLE

Finally there's a hearing aid that is literally out of sight and off your mind !

artude

*Clinics in Bangalore:* Residency Road | Koramangala | Indiranagar | Malleshwaram